ಆನಂದದ ಹುಡುಕಾಟ – ೨೬

# ಜೀವಶಿವ ಸೇವೆ

ಮೂಲ ಹಿಂದೀ : ಸ್ವಾಮಿ ಬ್ರಹ್ಮೇಶಾನಂದ

ಅನುವಾದ : ಮಾತಾ ತ್ಯಾಗಮಯೀ

ಸುಮಾರು ನೂರು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ''ತ್ಯಾಗ ಮತ್ತು ಸೇವೆ ನಮ್ಮ ನಾಡಿನ ಆದರ್ಶ. ರಾಷ್ಟ್ರವನ್ನು ಈ ದಿಕ್ಕಿನಲ್ಲಿ ತೊಡಗಿಸಿದರೆ ಬೇರೆಲ್ಲವೂ ತಾನೇ ತಾನಾಗಿ ಸರಿಹೋಗುತ್ತದೆ.'' ಎಂದು ನುಡಿದಿದ್ದಾರೆ. ಇಂದು ರಾಷ್ಟ್ರದಾದ್ಯಂತ ಸೇವಾಸಂಸ್ಥೆಗಳು ಹರಡಿರುವಲ್ಲಿ ಸ್ವಾಮೀಜಿಯವರ ಈ ವಾಣಿಯನ್ನು ನಾವು ತಕ್ಕ ಮಟ್ಟಿಗಾದರೂ ಆಲಿಸಿದ್ದೇವೆ ಎಂಬುದು ಸಂತಸದ ಸಂಗತಿ. ಸರಕಾರವೂ ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ಸೇವೆಯನ್ನು ಶಿಕ್ಷಣದ ಅಂಗವನ್ನಾಗಿಸಿದೆ. ಆದರೆ ಸ್ವಾಮೀಜಿ ಬಯಸಿದ ಸೇವೆಯ ಆದರ್ಶವೇನು? ಎಂತಹ ಸೇವೆಯನ್ನು ಅವರು ರಾಷ್ಟ್ರೀಯ ಆದರ್ಶವೆಂದು ಕರೆದರು ಎಂಬುದನ್ನು ತಿಳಿದುಕೊಳ್ಳುವುದು ಆವಶ್ಯಕ.

### ಸೇವೆ ಎಂದರೇನು?

ಸೇವೆ ಎಂಬ ಶಬ್ದಕ್ಕೆ ವಿವಿಧ ಅರ್ಥಗಳನ್ನು ಹೇಳಬಹುದು. ಸಾಮಾನ್ಯ ಮಾತುಕತೆಯಲ್ಲಿ ಅಥವಾ ವ್ಯವಹಾರದಲ್ಲಿ ಸೇವೆ ಶಬ್ದವನ್ನು ಕೆಲಸಕಾರ್ಯ ಅಥವಾ ಚಟುವಟಿಕೆ ಎಂದು ಉಪಯೋಗಿಸಲಾಗುತ್ತಿದೆ. ವ್ಯಕ್ತಿ ತನ್ನ ಉದ್ಯೋಗವನ್ನು ಹೇಳುವಾಗ, ತಾನು ಇಂತಹ ಸೇವೆಯನ್ನು ಮಾಡುತ್ತಿದ್ದೇನೆ ಎಂದು ಹೇಳುತ್ತಾನೆ. ಆಧುನಿಕ ಸಮಾಜ ರಚನೆಯಲ್ಲಿ ಒಬ್ಬ ವ್ಯಕ್ತಿಯ ಜೀವನವು ನೂರಾರು ಜನರ ಸೇವೆಯಿಲ್ಲದೆ ನಡೆಯಲಾರದು ಎಂಬಷ್ಟು ಜಟಿಲವಾಗಿದೆ. ನಮ್ಮ ಅನ್ನ, ನಮ್ಮ ಬಟ್ಟೆ, ನಮ್ಮ ಕೈ ತಲುಪಲು ಅದೆಷ್ಟು ಕೈಗಳನ್ನು ದಾಟಿ ಬಂದಿದೆ ಗೊತ್ತಿಲ್ಲ. ಅಂತೆಯೇ ನಾವು ಮಾಡುವ ಒಂದು ಸಣ್ಣ ಕೆಲಸವೂ ಎಷ್ಟು ಜನರಿಗೆ ಉಪಯುಕ್ತವಾಗಬಲ್ಲದು, ಎಂಬುದನ್ನು ನಾವು ಊಹಿಸಲಾರೆವು. ಆದ್ದರಿಂದ ತನ್ನ ಉದ್ಯೋಗವನ್ನು ಸೇವೆ ಎಂದು ಕರೆಯುವುದು ತಪ್ಪಾಗಲಾರದು. ಸುಲಭವಾಗಿ ಹೇಳಬೇಕೆಂದರೆ ಸಂಭಾವನೆ ಸಹಿತವಾಗಿ ಅಥವಾ ಸಂಭಾವನೆ ರಹಿತವಾಗಿ ಇತರರ ನೆರವಿಗೆಂದು ಮಾಡಲ್ಪಟ್ಟ ಪ್ರತಿಯೊಂದು ಕೆಲಸವೂ ಸೇವೆ. ಆದರೂ ವೇತನ ಪಡೆದು ಮಾಡುವ ಕೆಲಸವನ್ನು ಸೇವೆ ಎನ್ನಲಾಗದು.

ಇನ್ನೊಂದು ಬಗೆಯ ಸೇವೆ, ವ್ಯಕ್ತಿ ತನ್ನ ಹವ್ಯಾಸಕ್ಕೆಂದು, ಅಭಿರುಚಿಗೆಂದು ಮಾಡುವಂತಹ ಸೇವೆ. ಒಂದಿಷ್ಟು ಜನ ಸೇರಿ ಒಂದು ಸೇವಾಸಂಸ್ಥೆಯನ್ನು ತೆರೆಯುತ್ತಾರೆ, ವಂತಿಗೆ ಸಂಗ್ರಹಿಸುತ್ತಾರೆ. ಬಡವರಿಗೆ ಔಷಧಿ, ವಸ್ತ್ರಗಳನ್ನು ವಿತರಿಸುತ್ತಾರೆ, ಹೆಚ್ಚಿನ ಕಡೆ ಈ ಬಗೆಯ ಸೇವಾಕಾರ್ಯಗಳು ಪತ್ರಿಕಾವರದಿ, ಫೋಟೋ ಮಾತ್ರಕ್ಕೆ ಸೀಮಿತವಾಗಿ ಬಿಡುತ್ತದೆ. ಇಂತಹ ಸೇವೆಗಳಲ್ಲಿ ಸೇವಾಭಾವನೆ ಕಡಿಮೆ ಹೆಸರು-ಕೀರ್ತಿಯ ಬಯಕೆ, ಅಹಂಕಾರ ತೃಪ್ತಿ ಪ್ರಧಾನವಾಗಿರುತ್ತದೆ.

ಆದರೆ ಎಲ್ಲರೂ ಹೆಸರು ಕೀರ್ತಿಯ ಕಾಮನೆಯಿಂದಲೇ ಸೇವೆ ಮಾಡುತ್ತಾರೆಂದಲ್ಲ. ಹಲಕೆಲವರು ನಿಸ್ವಾರ್ಥತೆ, ಔದಾರ್ಯದಿಂದ ದೀನದುಃಖಿಗಳ ಸೇವೆಯಲ್ಲಿ ತೊಡಗಿದವರಿದ್ದಾರೆ. ಅಲ್ಲಿ ಅವರ ಸ್ವಾರ್ಥವಿಲ್ಲ. ಅವರು ತಮ್ಮ ಸೇವೆಗೆ ಪ್ರತಿಫಲವನ್ನು ಬಯಸರು. ಅವರಿಗೆ ಹೊಗಳಿಕೆ ಬೇಕಿಲ್ಲ. ಸೇವೆಗಾಗಿ ಸೇವೆ ಎಂಬ ಉನ್ನತ ಆದರ್ಶದಿಂದ ಸೇವಾನಿರತರಾಗುವವರು ಬಹಳ ಕಡಿಮೆ ಜನ. ಅದರಲ್ಲೂ ಬಹಳ ಕಡಿಮೆ ಜನ ಕೊನೆಯವರೆಗೂ ಆ ಭಾವವನ್ನು ಕಾಪಾಡಿಕೊಳ್ಳುತ್ತಾರೆ.

ಮೇಲೆ ಹೇಳಿದ ನಿಷ್ಕಾಮಕರ್ಮದ ರೂಪವೇ ಜೀವಶಿವ ಸೇವೆ. ಈ ದೃಷ್ಟಿಯಿಂದ ಸೇವೆಗೆ ಆಧ್ಯಾತ್ಮಿಕ ದಿಕ್ಕು ಸಿಗುತ್ತದೆ. ಸರ್ವಂ ಖಲ್ವಿದಂ ಬ್ರಹ್ಮ-ಪ್ರತಿಯೊಬ್ಬರಲ್ಲಿ ಭಗವಂತನಿದ್ದಾನೆ. ಭಾರತೀಯ ತತ್ತ್ವಶಾಸ್ತ್ರ ಹಾಗೂ ಸಂಸ್ಕೃತಿಯ ಈ ಸಿದ್ಧಾಂತದ ಅನುಷ್ಠಾನ ರೂಪವೇ ದೀನದುಃಖಿಗಳಲ್ಲಿ ಶಿವನನ್ನು ಕಂಡು ಮಾಡುವ ಸೇವೆ. ಅದು ಕೇವಲ ಸೇವೆಯಲ್ಲ, ಪೂಜೆ. ಅದು ವ್ಯಕ್ತಿಯ ಆಧ್ಯಾತ್ಮಿಕ ಸಾಧನೆಯ ಅಂಗ.

### ಸೇವೆಯೆಂಬ ಪೂಜೆ

ಅನಾದಿಕಾಲದಿಂದ ಮೋಕ್ಷ, ಆತ್ಮಸಾಕ್ಷಾತ್ಕಾರ, ಭಗವತ್ ಸಾಕ್ಷಾತ್ಕಾರ ನಮ್ಮ ಗುರಿ. ಮೋಕ್ಷ ಪುರುಷಾರ್ಥವನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ಸಂಸ್ಕೃತಿಯು ರೂಪಗೊಂಡಿದೆ. ಶತಶತಮಾನಗಳ ತನ್ನ ಅಭ್ಯಾಸ ಹಾಗೂ ಸಂಶೋಧನೆಗಳಿಂದ ಭಾರತೀಯ ಮನಸ್ಸು ಹುಟ್ಟಿನಿಂದ ಮರಣದವರೆಗೆ ತಾನು ಮಾಡುವಂತಹ ಪ್ರತಿಯೊಂದು ಕೆಲಸ ಕಾರ್ಯ-ಚಟುವಟಿಕೆಗಳಿಗೆ ಆಧ್ಯಾತ್ಮಿಕ ದಿಸೆಯನ್ನು ನೀಡುವ ಒಂದು ವಿಶೇಷ ಸಾಮರ್ಥ್ಯವನ್ನು ಗಳಿಸಿಕೊಂಡಿದೆ. ಆಧುನಿಕ ಯುಗದಲ್ಲಿ ಈ ಆದರ್ಶಕ್ಕೆ ಸಾಕಾರರೂಪವನ್ನು ನೀಡಲು ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಜೀವಶಿವ ಸೇವೆಯನ್ನು ಪೂಜೆ, ಆಧ್ಯಾತ್ಮಿಕ ಸಾಧನೆ ಎಂದು ತಿಳಿಯಪಡಿಸಿ ದೇಶದ ಜನತೆಗೆ ಹೊಸ ದಿಕ್ಕನ್ನು ದಯಪಾಲಿಸಿರುವರು.

ಸಾಮಾನ್ಯವಾಗಿ ಆಧ್ಯಾತ್ಮಿಕ ಸಾಧನೆಯು ಮೂರ್ತಿಪೂಜೆ ಅಥವಾ ಯಾವುದಾದರೂ ಒಂದು ಸ್ಥೂಲ ಪ್ರತೀಕದ ಪೂಜೆ ಅಥವಾ ಉಪಾಸನೆಯಿಂದ ಆರಂಭವಾಗುತ್ತದೆ. ಭಕ್ತನು ಮೂರ್ತಿ ಅಥವಾ ಭಾವಚಿತ್ರದಲ್ಲಿ ಇಷ್ಟದೇವನ ಅಸ್ತಿತ್ವವನ್ನು ಭಾವಿಸುತ್ತ, ಪತ್ರ, ಪುಷ್ಪ, ಫಲ, ಗಂಧ, ಧೂಪ, ದೀಪಗಳಿಂದ ಪೂಜಿಸುತ್ತಾನೆ. ಕ್ರಮೇಣ ಅವನು ಜಡ ಪ್ರತೀಕದಲ್ಲಿ ತನ್ನ ಇಷ್ಟದೇವನ ಜೀವಂತ ಸಾನ್ನಿಧ್ಯವನ್ನು ಮನಗಾಣುತ್ತಾನೆ. ಕೊನೆಯಲ್ಲಿ ಅವನಿಗೆ ತನ್ನ ಆರಾಧ್ಯದ ಚೈತನ್ಯ ಸ್ವರೂಪದ ದರ್ಶನವಾಗುತ್ತದೆ. ಒಂದು ನಿರ್ಜೀವ ಮೂರ್ತಿ ಅಥವಾ ಚಿತ್ರವನ್ನು ಪ್ರತೀಕವೆಂದು ಬಗೆದು ವ್ಯಕ್ತಿ ಭಗವಂತನ ಬಳಿ ಸಾರಲು ಸಾಧ್ಯವಾಗಿರುವಾಗ ಜೀವಂತ ಮನುಷ್ಯನನ್ನು ಭಗವಂತನೆಂದು ಬಗೆದು ಮಾಡುವ ಪೂಜೆಯಿಂದ ಭಗವಂತನ ದರ್ಶನವಾಗುವುದಿಲ್ಲವೆ? ಭಗವಂತನ

ಶ್ರೇಷ್ಠತಮ ಪ್ರತೀಕ ಮನುಷ್ಯ. ಅವನು ಪ್ರತೀಕ ಮಾತ್ರವಲ್ಲ, ಅವನು ಪರಮಾತ್ಮನ ಬಿಂಬ. ಉಳಿದ ಎಲ್ಲೆಡೆಗಿಂತ ಅವನಲ್ಲಿ ಪರ ಮಾತ್ಮ ಅಂಶ, ಪರಮಾತ್ಮನ ಪ್ರಕಾಶ ಅಧಿಕವಾಗಿದೆ. ವಿಗ್ರಹದಲ್ಲಿ ಪ್ರತೀಕದಲ್ಲಿ ಮಾಡುವಂತೆ ಅವನಲ್ಲಿ ಭಗವಂತನ ಆವಾಹನೆ ಯನ್ನು ಮಾಡಬೇಕಿಲ್ಲ.

ಸಿದ್ಧಾಂತದ ನೆಲೆಯಿಂದ ಜೀವಶಿವ ಸೇವೆಯು ಮೂರ್ತಿ ಪೂಜೆಗಿಂತ ಶ್ರೇಷ್ಠತಮವಾದರೂ ಈ ಸಾಧನಾ ಪ್ರಣಾಳಿಕೆಯಲ್ಲಿ ಕೆಲವು ಅಡಚಣೆಗಳಿವೆ. ವಿಗ್ರಹದಲ್ಲಿ ದೇವರನ್ನು ಕಾಣಲು ಅಭ್ಯಾಸ ವಾಗಿ ಹೋಗಿರುವ ಭಾರತೀಯ ಮನಸ್ಸಿಗೆ ಒಬ್ಬ ರೋಗಿ, ದರಿದ್ರ, ಭಿಕ್ಷುಕ, ನಿರಕ್ಷರಕುಕ್ಷಿಯಲ್ಲಿ ಭಗವಂತನನ್ನು ದರ್ಶಿಸಲು ಕಷ್ಟವಾಗು ತ್ತದೆ. ವಿಷ್ಣು, ದುರ್ಗೆ, ಕಾಳಿ, ಕೃಷ್ಣ, ರಾಮ ಇನ್ನಿತರ ಮೂರ್ತಿ ಗಳನ್ನು ಕಂಡು ನಮಗೆ ಇದು ಶಿಲೆ ಎಂದು ಎನಿಸುವುದಿಲ್ಲ. ಶ್ರದ್ಧಾಭಕ್ತಿಯಿಂದ ನಾವು ಅಲ್ಲಿ ನತಮಸ್ತಕರಾಗುತ್ತೇವೆ. ಆದರೆ ರೋಗಿಯಲ್ಲಿ, ದರಿದ್ರನಲ್ಲಿ ನಮಗೆ ನಾರಾಯಣ ಕಾಣಿಸುವು ದಿಲ್ಲ. ರೋಗಿ ಅಥವಾ ದರಿದ್ರನೇ ಕಾಣುತ್ತಾನೆ. ದೇವವಿಗ್ರಹ ಯಾವಾಗಲೂ ಒಂದೇ ರೀತಿ ಇರುತ್ತದೆ. ಅದರ ಮಂದಹಾಸ ಎಂದಿಗೂ ಮಾಸದು. ಆದರೆ ರೋಗಿ ನಾರಾಯಣ ಕೆಲವೊಮ್ಮೆ ಕೋಪಿಸಿಕೊಳ್ಳುವ, ಅಳುವ ಭಗವಂತ ಎನ್ನಿಸಬಹುದು. ಆದ್ದರಿಂದ ರೋಗಿ ನಾರಾಯಣ, ದರಿದ್ರ ನಾರಾಯಣ ಭಾವನೆಯನ್ನು ದೀರ್ಘಕಾಲ ಇರಿಸಿ ಬೆಳೆಸಿಕೊಂಡು ಹೋಗುವುದು ಕಠಿಣವಿದೆ. ಮೂರ್ತಿಪೂಜೆಯಲ್ಲಿ ಈ ಸಮಸ್ಯೆಯಿಲ್ಲ. ಈ ಭಾವನೆಯ ಅಭಾವದಿಂದ ರೋಗಿನಾರಾಯಣನ, ದರಿದ್ರ ನಾರಾಯಣನ ಸೇವೆ ಮೂರ್ತಿಪೂಜೆಯಷ್ಟು ಪರಿಣಾಮಕಾರಿಯಾಗುತ್ತಿಲ್ಲ.

ಈ ಸಮಸ್ಯೆಗೆ ಒಂದೇ ಒಂದು ಪರಿಹಾರ, ನಾವು ಮಾಡು ತ್ತಿರುವ ರೋಗಿ ಸೇವೆ, ದರಿದ್ರ ಸೇವೆ ನಾರಾಯಣ ಸೇವೆಯೇ ಆಗಿದೆ ಎಂದು ದೃಢಭಾವ ತಾಳಬೇಕು. ನಾವು ನಮ್ಮ ಆರಾಧ್ಯ ಮಾನವ ದೇವನ ಹೊರರೂಪವನ್ನು ನೋಡುವುದನ್ನು ಬಿಡ ಬೇಕು. ಅವನ ಬಾಹ್ಯರೂಪ ಹೇಗೇ ಇರಲಿ, ಅವನ ನಡೆ-ನುಡಿ ಏನೇ ಆಗಿರಲಿ ನಾವು ಸದಾ ಅವನು ನಮ್ಮ ಪಾಲಿನ ನಾರಾಯಣ, ನಾನು ಅವನ ಸೇವೆಯೆಂಬ ಪೂಜೆಯನ್ನು ಮಾಡುತ್ತಿದ್ದೇನೆ ಎಂದು ತಿಳಿದಿರಬೇಕು. ಮನಸ್ಸು ತನ್ನ ಹಳೆಯ ಅಭ್ಯಾಸದ ಬಲದಿಂದ ಅಥವಾ ಹಳೆಯ ಸ್ವಭಾವದಿಂದ ಅವನು ನಾರಾಯಣನೆಂಬುದನ್ನು ಮರೆತು, ಬಾಹ್ಯಮನುಷ್ಯ ರೂಪವನ್ನು ನೋಡಿ ದ್ವೇಷಿಸಬಹುದು ಅಥವಾ ಉಪೇಕ್ಷಿಸಬಹುದು. ಆದರೆ ನಾವು ಮತ್ತೆ ಮತ್ತೆ ಅವನಲ್ಲಿ ನಾರಾಯಣ ಬುದ್ಧಿಯನ್ನು ತಾಳಬೇಕು. ಮೂರ್ತಿಪೂಜೆಯಲ್ಲಿ ಲೋಪದೋಷಗಳಾದರೆ ಮೂರ್ತಿ ಕೋಪಿಸಿಕೊಳ್ಳದು. ಆದರೆ ರೋಗಿ ನಾರಾಯಣನ ಸೇವೆಯಲ್ಲಿ ಸ್ವಲ್ಪ ಹಿಂದುಮುಂದಾದರೆ ಅವನಿಗೆ ತೊಂದರೆಯಾಗಬಹುದು, ಅವನಿಗೆ ಅಸಮಾಧಾನವಾಗ ಬಹುದು. ಆದ್ದರಿಂದ ಜೀವಶಿವ ಪೂಜೆಯಲ್ಲಿ ಧೈರ್ಯ, ತಾಳ್ಮೆ, ಏಕಾಗ್ರತೆ ಇತ್ಯಾದಿ ಗುಣಗಳ ಅಗತ್ಯ ಹೆಚ್ಚು ಇದೆ.

ಜೀವಶಿವ ಸೇವೆಯ ಪೂಜಾ ವಸ್ತುಗಳಾವುವು? ರೋಗಿ ನಾರಾ ಯಣ, ದರಿದ್ರ ನಾರಾಯಣನ ಸೇವೆಗೆ ಪತ್ರ-ಪುಷ್ಪಗಳು ಬೇಕಾ ಗಿರುವುದಿಲ್ಲ, ಅನ್ನ, ವಸ್ತ್ರ, ಔಷಧಿಗಳು ಬೇಕಾಗಿರುವುದು. ರೋಗಿ ನಾರಾಯಣನಿಗೆ ಔಷಧಿ ಎಂಬ ಪುಷ್ಪವನ್ನು, ಪಥ್ಯವೆಂಬ ನೈವೇದ್ಯ ವನ್ನು ಬ್ಯಾಂಡೇಜ್-ಮುಲಾಮು ಎಂಬ ಗಂಧ-ಚಂದನವನ್ನು ಅರ್ಪಿಸಬೇಕು. ''ಇಹಾಗಚ್ಛ ಇಹ ತಿಷ್ಠ, ಇಹ ಸನ್ನಿಧೇಹಿ ಇಹ ಸನ್ನಿರುದ್ಧಸ್ವ'' ಎಂಬ ಮಂತ್ರಗಳಿಂದ ಆವಾಹನೆ ಮಾಡುವ ಬದಲು ''ಅಣ್ಣ, ನಿನಗೇನು ತೊಂದರೆಯಾಗುತ್ತಿದೆ? ನೀನು ಶೀಘ್ರ ಗುಣ ಹೊಂದುತ್ತೀಯ, ಚಿಂತಿಸಬೇಡ'' ಎಂಬ ಆವಾಹನ ಮಂತ್ರವನ್ನು ಹೇಳಬೇಕು.

ಬೇರೆ ಬೇರೆ ದೇವದೇವಿಯರ ಪೂಜಾವಿಧಾನಗಳು ಭಿನ್ನ ಭಿನ್ನ. ರಾಮಪೂಜೆ ಪದ್ಧತಿ ಬೇರೆ, ಕಾಳೀಪೂಜೆಯ ಪದ್ಧತಿ ಬೇರೆ. ಅದೇ ರೀತಿ ರೋಗಿ ನಾರಾಯಣ ಪೂಜೆಯ ರೀತಿ ಬೇರೆ, ದರಿದ್ರ ನಾರಾ ಯಣನ ಪೂಜಾ ಪದ್ಧತಿ ಬೇರೆ. ಟೈಫಾಯಿಡ್ ನಾರಾಯಣನ ಪೂಜೆಯ ವಿಧಾನ ಬೇರೆ, ಕಾಮಾಲೆ ರೋಗಿ ನಾರಾಯಣನ ಪೂಜಾವಿಧಾನ ಬೇರೆ. ಮೂರ್ತಿಪೂಜೆಯಲ್ಲಿ ಅಂಗನ್ಯಾಸ, ಕರ ನ್ಯಾಸ, ಭೂತಶುದ್ಧಿ ಇತ್ಯಾದಿ ಆರಂಭದ ಕ್ರಿಯೆಗಳಿವೆ. ಅದೇ ರೀತಿ ಸೇವಾಪೂಜೆಯಲ್ಲೂ ಕೆಲವು ಹಂತಗಳಿವೆ.

ರೋಗಿ ನಾರಾಯಣರ ಪೂಜೆಯಂತೆ ದರಿದ್ರ ನಾರಾಯಣರ, ಅಜ್ಞಾನಿ ನಾರಾಯಣರ ಪೂಜೆಯನ್ನು ಮಾಡಬೇಕು. ಮೂರ್ತಿ ಪೂಜೆಯಲ್ಲಿ ಹಲವು ಜನ ಸಹಾಯವನ್ನು ಮಾಡುವಂತೆ, ರೋಗಿ ನಾರಾಯಣರ, ದರಿದ್ರ ನಾರಾಯಣರ ಸೇವೆಯೆಂಬ ಪೂಜೆ ಯನ್ನು ಒಬ್ಬರು ಮಾಡಿದರೂ ಹಲವರು ಅದಕ್ಕೆ ಸಹಾಯ ಮಾಡ ಬಹುದು. ಪೂಜಾಕಾರ್ಯಕ್ಕೆ ಸಹಾಯ ಮಾಡಿದವರಿಗೆಲ್ಲ ಪೂಜೆಯ ಪುಣ್ಯ ಲಭಿಸುವಂತೆ ಸೇವಾಕಾರ್ಯಕ್ಕೆ ಸಹಾಯ ಮಾಡಿದ ಎಲ್ಲ ರಿಗೂ ಸೇವೆಯ ಪುಣ್ಯ, ಸೇವೆಯ ಕೃತಕೃತ್ಯಭಾವ ಲಭಿಸುವುದು.

ಈ ಬಗೆಯ ಸೇವೆಯೆಂಬ ಪೂಜೆಯ ಪ್ರಚಾರ ಸ್ವಾಮಿ ವಿವೇಕಾನಂದರ ಕೊಡುಗೆ. ಇದನ್ನೇ ಅನುಷ್ಠಾನ ವೇದಾಂತ ಎಂದು ಕರೆಯಲಾಗಿದೆ. ರಾಮಕೃಷ್ಣ ಮಠದ ಎಲ್ಲ ಆಶ್ರಮಗಳಲ್ಲಿ ಇದನ್ನು ಪಾಲಿಸುವ ಪ್ರಯತ್ನ ಮಾಡಲಾಗುತ್ತಿದೆ. ನೀವು ರಾಮಕೃಷ್ಣ ಮಠದ ಯಾವುದೇ ಆಶ್ರಮಕ್ಕೆ ಹೋದರೂ ಅಲ್ಲಿ ಸಂನ್ಯಾಸಿಗಳು ಕಛೇರಿ ಯಲ್ಲಿ, ಆಸ್ಪತ್ರೆಯ ವಾರ್ಡಿನಲ್ಲಿ, ಗೋಶಾಲೆಯಲ್ಲಿ, ಶಾಲಾ ತರಗತಿ ಯಲ್ಲಿ, ನಾರಾಯಣ ಸೇವೆಯಲ್ಲಿ ತೊಡಗಿರುವುದನ್ನು ನೋಡ ಬಹುದು.

'ಶಿವಜ್ಞಾನೇ ಜೀವಸೇವೆ'ಯನ್ನು ಎಲ್ಲರೂ ಮಾಡಬಹುದು. ಅದು ಕೇವಲ ಸಂನ್ಯಾಸಿಗಳಿಂದ ಆಗುವಂಥದ್ದು ಎಂದೇನೂ ಅಲ್ಲ. ಪ್ರತಿಯೊಬ್ಬ ವ್ಯಕ್ತಿ ತಾನಿರುವ ಪರಿಸರ ಸನ್ನಿವೇಶಗಳಲ್ಲಿ ಈ ವಿಶಿಷ್ಟ ಪೂಜೆಯನ್ನು ಮಾಡಿ ಧನ್ಯನಾಗಬಲ್ಲನು. ಈ ಯುಗಧರ್ಮ ಸೇವೆಯನ್ನು ಜೀವನದ ಪ್ರತಿಯೊಂದು ಹಂತದಲ್ಲಿ ಕೂಡ ಪಾಲಿ ಸುವ ಪ್ರಯತ್ನವನ್ನು ಮಾಡುವುದು, ಜೀವಶಿವಸೇವೆಯ ಆದರ್ಶ ವನ್ನು ಪ್ರೀತಿಸುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ತನ್ಮೂಲಕ ಈ ಆದರ್ಶವು ಮೂರ್ತಿಪೂಜಾ ಆದರ್ಶದಂತೆ ಭಾರತೀಯ ಜೀವನ ಮತ್ತು ಚಿಂತನೆಯ ಅವಿಭಾಜ್ಯ ಅಂಗವಾಗಬೇಕು.